# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ E-mail : kannadapostnews@gmail.com / ಕನ್ನಡ post Price: ₹1

Vol.No.02 | Issue. 100 | Pages. 2 | Date: 21-03-2026, SATURDAY RNI NO: KARKAN/2024/89601 Kannada Daily

ಸಂಪುಟ : 02 - ಸಂಚಿಕೆ : 100 - ಪುಟಗಳು : 2 21-03-2026 ಶನಿವಾರ Ph: 8762954248 ದರ : ₹1


# ಎಸ್‌ಐಟಿ ಚಾರ್ಜ್‌ಶೀಟ್‌ನಲ್ಲೂ ರಾಜಕೀಯ ಛಾಯೆ

## ಶಾಸಕ ಹೆಚ್.ಪಿ.ಸ್ವರೂಪ್ ಆರೋಪ | ಕಾನೂನು ಹೋರಾಟದ ಎಚ್ಚರಿಕೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಮಾಜಿ ಸಂಸದ ಪ್ರಜ್ವಲ್ ರೇವಣ್ಣ ಅವರದ್ದು ಎನ್ನಲಾದ ಅಶ್ಲೀಲ ವಿಡಿಯೋಗೆ ಸಂಬಂಧಿಸಿದಂತೆ ನ್ಯಾಯಾಲಯಕ್ಕೆ ಚಾರ್ಜ್‌ಶೀಟ್ ಸಲ್ಲಿಸಿರುವ ಎಸ್‌ಐಟಿ ಜೆಡಿಎಸ್ ಕಾರ್ಯಕರ್ತರನ್ನೇ ಗುರಿಯಾಗಿಸಿ ಹೆಸರು ಸೇರಿಸಿರುವುದು ಖಂಡನೀಯ ಎಂದು ಶಾಸಕ ಹೆಚ್.ಪಿ.ಸ್ವರೂಪ್ ಆಕ್ರೋಶ ವ್ಯಕ್ತಪಡಿಸಿದರು.

ಸುದ್ದಿಗೋಷ್ಠಿಯಲ್ಲಿ ಶುಕ್ರವಾರ ಮಾತನಾಡಿ, ನಮ್ಮ ಚಿಕ್ಕಪ್ಪ ಅವರ ಪುತ್ರ ರೇವಂತ್ ಹಾಗೂ ಕೆಲ ಜೆಡಿಎಸ್ ಕಾರ್ಯಕರ್ತರು ಪೆನ್‌ಡ್ರೈವ್ ಹಂಚಿಕೆ ಮಾಡಿದ್ದಾರೆ ಎಂಬುದು ಸತ್ಯಕ್ಕೆ ದೂರ. ಇದೊಂದು ರಾಜಕೀಯ ಪಿತೂರಿ, ಸರ್ಕಾರದ ಅಣತಿಯಂತೆ, ತನಿಖಾ ತಂಡ ಎಸ್‌ಐಟಿ ನಿಜವಾಗಿಯೂ ವಿಡಿಯೋ ಹಂಚಿರುವ ಪ್ರಭಾವಿಗಳ ಹೆಸರನ್ನು ಕೈ ಬಿಟ್ಟು, ಏನೂ ತಪ್ಪು ಮಾಡದವರನ್ನು ಸೇರಿಸಿದೆ ಎಂದು ಸಮಾಧಾನ ಹೊರ ಹಾಕಿದರು.

ವಿಶೇಷ ತನಿಖಾ ತಂಡ (ಎಸ್ ಐಟಿ) ನಿಷ್ಪಕ್ಷಪಾತವಾಗಿ ತನಿಖೆ ಮಾಡಿಲ್ಲ ಎಂದು ಅನುಮಾನ ವ್ಯಕ್ತಪಡಿಸಿದ ಶಾಸಕರು, ಎ1 ಆರೋಪಿ ನವೀನ್‌ನನ್ನು ಮಂಪರು ಪರೀಕ್ಷೆಗೆ ಒಳಪಡಿಸಿದರೆ

ನಿಜವಾದ ಹಂಚಿಕೆದಾರರ ಹೆಸರು ಹೊರ ಬರಲಿದೆ. ಆ ಕೆಲಸವನ್ನು ಎಸ್‌ಐಟಿ ಮಾಡಬೇಕು ಎಂದು ಒತ್ತಾಯಿಸಿದರು.

ಕಳೆದ ಎಂಪಿ ಚುನಾವಣೆಯನ್ನು ವಾಮಮಾರ್ಗದಲ್ಲಿ ಗೆಲ್ಲಲು ಯಾರೆಲ್ಲ ಪೆನ್‌ಡ್ರೈವ್ ಹಂಚಿದರು ಎಂಬುದು ಜಗಜ್ಜಾಹೀರಾಗಿದೆ. ಶಾಸಕರ ಸಂಬಂಧಿಕರು, ಜೆಡಿಎಸ್ ಕಾರ್ಯಕರ್ತರು ಹಂಚಿದ್ದಾರೆ ಎಂದು ಚಾರ್ಜ್‌ಶೀಟ್ ಹಾಕಿರುವುದು ತನಿಖೆ ಹಾದಿ ತಪ್ಪಿಸುವ ಹುನ್ನಾರ. 10-12 ಜೆಡಿಎಸ್ ಕಾರ್ಯಕರ್ತರು ಹಂಚಿದ್ದಾರೆ ಎಂದಿರುವುದನ್ನು ತೀವ್ರವಾಗಿ ಖಂಡಿಸುವೆ ಎಂದರು.

ನಿಜವಾದ ಆರೋಪಿಗಳು ಯಾರೆಂಬುದು ಹೊರಬರಲು ಡಿಸಿಎಂ ಹಾಗೂ ಗೃಹ ಸಚಿವರು ಉನ್ನತ ಮಟ್ಟದ ತನಿಖೆಗೆ ವಹಿಸಬೇಕು ಎಂದು ಆಗ್ರಹಿಸಿದರು.

ಚಾರ್ಜ್‌ಶೀಟ್‌ನಲ್ಲಿ ಸಂಬಂಧವೇ ಇಲ್ಲದ ನಮ್ಮ ಪಕ್ಷದ ಕೆಲವರ ಹೆಸರು ಸೇರಿಸಿರುವುದನ್ನು ಖಂಡಿಸಿ, ಕೆಲವರ ಹೆಸರುಗಳನ್ನು ಉದ್ದೇಶಪೂರ್ವಕವಾಗಿ ಕೈ ಬಿಟ್ಟಿರುವುದನ್ನು ವಿರೋಧಿಸಿ ಕಾನೂನು ಹೋರಾಟ ಮಾಡುವುದಾಗಿ ತಿಳಿಸಿದ ಸ್ವರೂಪ್, ನಮ್ಮ ಕಾರ್ಯಕರ್ತರು ಯಾವುದೇ ಕಾರಣಕ್ಕೂ ಎದೆಗುಂದುವುದು ಬೇಡ ಎಂದರು.

ಜಿಲ್ಲೆಯಲ್ಲಿ ಜೆಡಿಎಸ್ ಬಲ ಕುಂದಿಸಲು ಕಾಂಗ್ರೆಸ್‌ನವರು ಏನೇನೋ ಮಾಡಿದರು. ಅದಕ್ಕೆ ನಾವು ಜನತಾ ಸಮಾವೇಶದ ಮೂಲಕ ಉತ್ತರ ಕೊಟ್ಟಿದ್ದೇವೆ. ಚಾರ್ಜ್‌ಶೀಟ್‌ನಲ್ಲಿ ನಮ್ಮವರ ಹೆಸರು ಸೇರಿಸಿ ಪಕ್ಷದ ಬಲ ಕಡಿಮೆ ಮಾಡುತ್ತೇವೆ ಎಂಬುದು ಸುಳ್ಳು. ನಮ್ಮ ಪಕ್ಷ ಸದೃಢವಾಗಿದೆ ಎಂದರು.

ಪೆನ್‌ಡ್ರೈವ್ ಹಂಚಿಕೆಯಲ್ಲಿ ನಮ್ಮ ಕಾರ್ಯಕರ್ತರು ಭಾಗಿಯಾಗಿಲ್ಲ. ತನಿಖೆ ದಿಕ್ಕು ತಪ್ಪಿಸಲು ಹಾಗೂ ಜೆಡಿಎಸ್ ಪಕ್ಷದ ಮೇಲೆಯೇ ಗೂಬೆ ಕೂರಿಸುವ ದುರುದ್ದೇಶದಿಂದ ಹೀಗೆ ಮಾಡಲಾಗಿದೆ. ಅದಕ್ಕಾಗಿಯೇ ನವೀನ್‌ನನ್ನು ಮಂಪರು ಪರೀಕ್ಷೆಗೆ ಒಳಪಡಿಸಬೇಕು.

ಅಮಾಯಕರ ಹೆಸರು ಸೇರ್ಪಡೆ, ನಿಜ ಆರೋಪಿಗಳ ಹೆಸರು ಕೈ ಬಿಟ್ಟಿರುವುದರ ವಿರುದ್ಧ ಕಾನೂನು ಹೋರಾಟ ಮಾಡಲು ನಿರ್ಧರಿಸಲಾಗಿದೆ ಎಂದರು.

ಜೆಡಿಎಸ್ ತಾಲೂಕು ಅಧ್ಯಕ್ಷ ಎಸ್.ದ್ಯಾವೇಗೌಡ, ಜಿಲ್ಲಾ ಮಾಧ್ಯಮ ವಕ್ತಾರ ಹೊಂಗೆರೆ ರಘು, ಮುಖಂಡರಾದ ಸಮೀರ್, ಶಿವಣ್ಣ, ಮಧು ಪಟೇಲ್, ವಿಜಯಕುಮಾರ್ ಇದ್ದರು.




> ಇಂತಹ ಕೆಟ್ಟ ಆಡಳಿತವನ್ನು ಇತಿಹಾಸದಲ್ಲಿ ನೋಡಿಲ್ಲ. ಜಿಲ್ಲೆಯಲ್ಲಿ ಜೆಡಿಎಸ್ ಅನ್ನು ನಾಮಾವಶೇಷ ಮಾಡುತ್ತೇವೆಂದು ಹೊರಟಿದ್ದವರಿಗೆ ಜನತಾ ಸಮಾವೇಶದ ಮೂಲಕ ಉತ್ತರ ನೀಡಿದ್ದೇವೆ. ಯಾವ ಕಾರಣಕ್ಕೂ ಪಕ್ಷದ ಕಾರ್ಯಕರ್ತರು ದೃತಿಗೆಡುವುದು ಬೇಡ. ಕಾನೂನು ಹೋರಾಟದ ಮೂಲಕ ನ್ಯಾಯ ಪಡೆಯೋಣ.
> **- ಹೆಚ್.ಪಿ.ಸ್ವರೂಪ್, ಶಾಸಕ**

### ಕುಟುಂಬದಲ್ಲಿ ಒಡಕು ಮೂಡಿಸುವ ಯತ್ನ

ದೋಷಾರೋಪಣಾ ಪಟ್ಟಿಯಲ್ಲಿ ಎ1,ಎ2 ಸೇರಿಸಿ, ಎ3,ಎ4 ಕೈಬಿಡಲಾಗಿದೆ. ಹಾಗೆಯೇ ಎ8 ರಿಂದ 17,ಎ17 ರಿಂದ ಎ21 ರ ವರೆಗೆ ಹೆಸರಿಲ್ಲದೇ ಇರುವುದು ಹಲವು ರೀತಿಯ ಅನುಮಾನಗಳಿಗೆ ಎಡೆ ಮಾಡಿಕೊಟ್ಟಿದೆ. ಈ ರೀತಿಯ ಕುತಂತ್ರದ ಮೂಲಕ ನಮ್ಮ ಹಾಗೂ ರೇವಣ್ಣ ಅವರ ಕುಟುಂಬದ ಸಂಬಂಧ ಹಾಳು ಮಾಡಲು ಸಾಧ್ಯವೇ ಇಲ್ಲ. ರೇವಣ್ಣ ಅವರಿಗೂ ಸತ್ಯಾಸತ್ಯತೆ ಗೊತ್ತಿದೆ. ನಮ್ಮ ತಂದೆಯ ಕಾಲದಿಂದಲೂ ನಾವು ದೇವೇಗೌಡರ ಕುಟುಂಬಕ್ಕೆ ನಿಷ್ಠರಾಗಿದ್ದೇವೆ. ಕೀಳುಮಟ್ಟದ ರಾಜಕಾರಣ ಎಂದೂ ಮಾಡಿಲ್ಲ, ಮುಂದೆಯೂ ಮಾಡಿಲ್ಲ. ದೊಡ್ಡ ಮನೆಯವರ ಕುಟುಂಬಕ್ಕೆ ನಾವೆಲ್ಲರೂ ಸದಾ ಋಣಿಯಾಗಿರುತ್ತೇವೆ. ಸಂಬಂಧ ಕೆಡಿಸುವವರ ದುರಾಸೆ ಎಂದೂ ಫಲಿಸುವುದಿಲ್ಲ ಎಂದು ಶಾಸಕರು ತಿರುಗೇಟು ನೀಡಿದರು.

# ಬೈಕ್ ರಿಪೇರಿಗೆಂದು ಹೋದ ಯುವಕ ಮರಳಿದ್ದು ಹೆಣವಾಗಿ!

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಹಾಸನ: ತಾಲ್ಲೂಕಿನ ದುದ್ದ ಠಾಣೆ ವ್ಯಾಪ್ತಿಯಲ್ಲಿ ಯುವಕನೊಬ್ಬ ಹಣಕಾಸಿನ ವಿಚಾರಕ್ಕೆ ಸ್ನೇಹಿತನಿಂದಲೇ ಹತನಾಗಿರುವ ಘಟನೆ ನಡೆದಿದ್ದು, ಸಾಕ್ಷ್ಯ ನಾಶಕ್ಕಾಗಿ ಮೃತದೇಹವನ್ನು ಸುಟ್ಟು ಹಾಕಿದ್ದಾರೆ.

ಗಂಡಸಿ ಹೋಬಳಿ ಕಾಡಯ್ಯನಕೊಪ್ಪಲು ಗ್ರಾಮದ ವರುಣ್ (22) ಮೃತ. ಸ್ನೇಹಿತರಾದ ಶಶಾಂಕ್, ಸತೀಶ, ಕಿರಣ್, ಅಭಿ, ಜೀವನ್, ಚೇತನ್, ಗಜ, ಪೃಥ್ವಿಕ್ ಎಂಬುವವರು ಒಟ್ಟಾಗಿ ಹಲ್ಲೆ ನಡೆಸಿದ್ದಾರೆ ಎಂದು ತಿಳಿದುಬಂದಿದೆ.

ಮಾ. 10ರಂದು ಬೈಕ್ ರಿಪೇರಿ ಮಾಡಿಸಿಕೊಂಡು ಬರುತ್ತೇನೆಂದು ಗಂಡಸಿಗೆ ಹೋಗಿದ್ದ ವರುಣ್ ಸಂಜೆಯಾದರೂ ವಾಪಸ್ ಬಂದಿರಲಿಲ್ಲ. ಕುಟುಂಬಸ್ಥರು ನಾಲ್ಕೈದು ದಿನ ಹುಡುಕಾಟ ನಡೆಸಿದರೂ ಪತ್ತೆಯಾಗದ ಹಿನ್ನೆಲೆಯಲ್ಲಿ ಮಾ. 15ರಂದು ಗಂಡಸಿ ಠಾಣೆಯಲ್ಲಿ ನಾಪತ್ತೆ ಪ್ರಕರಣ ದಾಖಲಿಸಿದ್ದರು.

ವರುಣ್ ಮತ್ತು ಹಾಸನದ ಶಶಾಂಕ್ ನಡುವೆ ಹಣಕಾಸಿನ ವೈಷಮ್ಯವಿತ್ತು. ಇದೇ ವಿಚಾರಕ್ಕೆ ಮಾ. 10ರಂದು ಶಶಾಂಕ್ ತನ್ನ ಸ್ನೇಹಿತ ಹಂಗರಹಳ್ಳಿಯ ಕಿರಣ್‌ನ ತೋಟದ ಮನೆಗೆ ವರುಣ್‌ನನ್ನು ಕರೆದುಕೊಂಡು ಬಂದು ಮಾರಕಾಸ್ತ್ರಗಳಿಂದ ಹೊಡೆದು ಗಂಭೀರ ಗಾಯಗೊಳಿಸಿದ್ದರು. ನಂತರ ಶಶಾಂಕ್‌ನ ಮನೆಗೆ ಕರೆತಂದು ಅಲ್ಲಿಯೂ ಚಾಕುವಿನಿಂದ ಇರಿದು ಕೊಲೆ ಮಾಡಿದ್ದರು ಎನ್ನಲಾಗಿದೆ. ನಂತರ ಸಾಕ್ಷ್ಯ ನಾಶಕ್ಕಾಗಿ ಮೃತದೇಹವನ್ನು ಜೇನುಕಲ್ ಸಿದ್ದೇಶ್ವರಸ್ವಾಮಿ ಬೆಟ್ಟದ ಹಿಂಭಾಗ ಎಸೆದಿದ್ದಾರೆ. ಪ್ರಕರಣ ದಾಖಲಿಸಿಕೊಂಡಿರುವ ದುದ್ದ ಠಾಣೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ.

## ದೇವಿರಮ್ಮ ದೇಗುಲದಲ್ಲಿ ಕಳವು

ಬೇಲೂರು: ದೇವಸ್ಥಾನ ಬಾಗಿಲು ಮುರಿದು ಒಳನುಗ್ಗಿರುವ ಕಳ್ಳರು ದೇವರ ಮೂರ್ತಿಗೆ ಹಾಕಿದ್ದ ಚಿನ್ನ ಹಾಗೂ ಬೆಳ್ಳಿ ಆಭರಣ ಕದ್ದಿರುವ ಘಟನೆ ತಾಲ್ಲೂಕಿನ ಶೆಟ್ಟಿಗೆರೆ ಗ್ರಾಮದಲ್ಲಿ ನಡೆದಿದೆ. ಗ್ರಾಮದ ದೇವಿರಮ್ಮ ದೇವಸ್ಥಾನಕ್ಕೆ ಮಾ. 18ರ ರಾತ್ರಿ, ನುಗ್ಗಿರುವ ಕಳ್ಳರು ಗರ್ಭಗುಡಿಯಲ್ಲಿದ್ದ 500 ಗ್ರಾಂ ತೂಕದ ಬೆಳ್ಳಿ ಬಟ್ಟಲು, ದೇವರ ಕೊರಳಿಗೆ ಹಾಕಿದ್ದ 4 ಗ್ರಾಂ ಚಿನ್ನದ ತಾಳಿ ಕಳವು ಮಾಡಿದ್ದಾರೆ.

# ಗುಡ್ ಸಿಟಿಜನ್ ಕಾಲೇಜಿನಿಂದ ಕ್ರಿಕೆಟ್ ಪಂದ್ಯಾವಳಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಸದೃಢತೆಗೆ ಕ್ರೀಡೆ ಸಹಕಾರಿಯಾಗಿದೆ ಎಂದು ನಿವೃತ್ತ ದೈಹಿಕ ಶಿಕ್ಷಣಾಧಿಕಾರಿ ಹೆಚ್.ಎನ್.ವೆಂಕಟೇಶ್ ಹೇಳಿದರು.

ಗುಡ್ ಸಿಟಿಜನ್ ಕಾಲೇಜು ವತಿಯಿಂದ ನಗರದ ಸರ್ಕಾರಿ ವಿಜ್ಞಾನ ಕಾಲೇಜು ಮೈದಾನದಲ್ಲಿ ಆಯೋಜಿಸಿದ್ದ ಜಿಸಿಸಿ ಪ್ರೀಮಿಯರ್ ಲೀಗ್ ಕ್ರಿಕೆಟ್ ಪಂದ್ಯಾವಳಿಗೆ ಚಾಲನೆ ನೀಡಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಗೆ ವಿದ್ಯಾಭ್ಯಾಸದ ಜೊತೆಗೆ ಕ್ರೀಡೆಯು ಮಹತ್ವವಾಗಿರುತ್ತದೆ. ಕ್ರೀಡೆಯಿಂದ ದೈಹಿಕ ಹಾಗು ಮಾನಸಿಕ ಆರೋಗ್ಯ ಕಾಪಾಡಿಕೊಳ್ಳಬಹುದು. ಸೋಲು ಗೆಲುವನ್ನು ಸಮಾನವಾಗಿ ಸ್ವೀಕರಿಸುವ ಮನೋಬಲವನ್ನು ಇಂತಹ ಕ್ರೀಡಾಕೂಟಗಳು ಹೆಚ್ಚಿಸುತ್ತವೆ. ಪರಸ್ಪರ ಸ್ನೇಹ, ಬಾಂಧವ್ಯ ವೃದ್ಧಿಯೂ ಸಾಧ್ಯವಾಗುತ್ತದೆ ಎಂದರು.

ವಿದ್ಯಾರ್ಥಿಗಳು ಕೇವಲ ಪಠ್ಯ ಪುಸ್ತಕ ಅಧ್ಯಯನಕ್ಕಷ್ಟೇ ಸೀಮಿತರಾಗದೆ ಕ್ರೀಡಾ ಚಟುವಟಿಕೆಗಳಲ್ಲಿ ಪಾಲ್ಗೊಳ್ಳಬೇಕು. ಉಪನ್ಯಾಸಕರು ಈ ನಿಟ್ಟಿನಲ್ಲಿ ಗಂಭೀರ ಚಿಂತನೆ ನಡೆಸಬೇಕೆಂದರು.




ರಾಷ್ಟ್ರೀಯ ಅಥ್ಲೆಟಿಕ್ ಕ್ರೀಡಾಪಟು ಡಿ.ಜೆ.ಕಾವ್ಯ ಹಾಗೂ ಬಾಸ್ಕೆಟ್‌ಬಾಲ್ ಪಟು ಪ್ರದೀಪ್ ಭಾಗವಹಿಸಿದ್ದರು. ಗುಡ್ ಸಿಟಿಜನ್ ಪ್ರಥಮ ದರ್ಜೆ ಕಾಲೇಜು ಪ್ರಾಂಶುಪಾಲ ಕಾಂತರಾಜು, ಪದವಿ ಪೂರ್ವ ಕಾಲೇಜು ಪ್ರಾಂಶುಪಾಲ ಹೇಮಂತ್ ಕುಮಾರ್ ಹಾಜರಿದ್ದರು. ಚೇತನ್ ನಾಯಕತ್ವದ ಜಿಸಿಸಿ ಸ್ಟ್ರೈಕರ್ಸ್ ತಂಡ ಜಯ ಸಾಧಿಸಿತು.

# ನವಿಲೆ ನಾಗೇಶ್ವರ ಸ್ವಾಮಿಗೆ ತೇರು ಮನೆ, ಮಹಾನವಮಿ ಮಂಟಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲೂಕಿನ ನವಿಲೆ ನಾಗೇಶ್ವರ ಸ್ವಾಮಿ ತೇರು ಮನೆ ಹಾಗೂ ಮಹಾನವಮಿ ಮಂಟಪವನ್ನು 35 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಲಾಗುತ್ತಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ನವಿಲೆ ಗ್ರಾಮದಲ್ಲಿ ನೂತನ ರಥದ ಮನೆ ಹಾಗೂ ಮಹಾನವಮಿ ಮಂಟಪ ನಿರ್ಮಾಣಕ್ಕೆ ಭೂಮಿಪೂಜೆ ನೆರವೇರಿಸಿ ಮಾತನಾಡಿದ ಅವರು, 20 ಲಕ್ಷ ರೂ.ಗಳಲ್ಲಿ ತೇರು ಮನೆ, 15 ಲಕ್ಷ ರೂ. ವೆಚ್ಚದಲ್ಲಿ ಮಹಾನವಮಿ ಮಂಟಪ ನಿರ್ಮಾಣ ಮಾಡಲಾಗುತ್ತದೆ. ವೈಯಕ್ತಿಕವಾಗಿ 5 ಲಕ್ಷ ರೂ. ಅನುದಾನ ನೀಡುತ್ತೇನೆ ಎಂದು ಭರವಸೆ ನೀಡಿದರು.

ಭಕ್ತರ ಸಹಕಾರದಿಂದ 90 ಲಕ್ಷ ರೂ. ವೆಚ್ಚದಲ್ಲಿ ನೂತನ ರಥ ನಿರ್ಮಾಣಗೊಂಡಿದೆ. ರಥದ ಮನೆ ಅವಶ್ಯಕತೆ ಇರುವ ಹಿನ್ನೆಲೆಯಲ್ಲಿ ಕಾಮಗಾರಿ ಕೈಗೆತ್ತಿಕೊಳ್ಳಲಾಗಿದೆ. ನವಿಲೆ ನಾಗೇಶ್ವರ ಸ್ವಾಮಿ ಕ್ಷೇತ್ರಕ್ಕೆ ಬೆಂಗಳೂರು ಸೇರಿ ರಾಜ್ಯದ ನಾನಾ ಭಾಗಗಳಿಂದ ಸಾವಿರಾರು ಭಕ್ತರು ಬರುತ್ತಾರೆ ಎಂದರು.

ಅನ್ನ ದಾಸೋಹ, ಕಲ್ಯಾಣ ಮಂಟಪ, ಸಾರಿಗೆ ವ್ಯವಸ್ಥೆ, ಶೌಚಾಲಯ, ಕುಡಿಯುವ ನೀರು ಸೇರಿ ಮೂಲಸೌಕರ್ಯ ಕಲ್ಪಿಸಲಾಗಿದೆ. ಮುಂಬರುವ ದಿನಗಳಲ್ಲೂ ಪುಣ್ಯ ಕ್ಷೇತ್ರದ ಅಭಿವೃದ್ಧಿಗೆ ಒತ್ತು ನೀಡಲಾಗುವುದು ಎಂದರು.

ಗ್ರಾಮದಲ್ಲಿ ವ್ಯವಸ್ಥಿತವಾಗಿ ರಥೋತ್ಸವ ನಡೆಸಲು ವಿದ್ಯುತ್ ಲೈನ್ ಸಮಸ್ಯೆಯಾಗುತ್ತಿರುವ ಬಗ್ಗೆ ಗ್ರಾಮಸ್ಥರು ಹೇಳಿಕೊಂಡಿದ್ದಾರೆ. ಈ ಬಗ್ಗೆ ಕ್ರಮ ವಹಿಸುವಂತೆ ನುಗ್ಗೇಹಳ್ಳಿ ಉಪ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್‌ಗೆ ತಿಳಿಸಲಾಗಿದೆ. ಸದ್ಯದಲ್ಲೇ ವಿದ್ಯುತ್ ಲೈನ್ ಬದಲಾವಣೆಗೆ ಕ್ರಮ ವಹಿಸುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ ಎಂದರು.

ಅಖಿಲ ಭಾರತ ವೀರಶೈವ ಲಿಂಗಾಯತ ಮಹಾಸಭಾ ಜಿಲ್ಲಾಧ್ಯಕ್ಷ ನವಿಲೆ ಪರಮೇಶ್ ಮಾತನಾಡಿ, ಗ್ರಾಮದ ನಾಗೇಶ್ವರ ಸ್ವಾಮಿ ದೇವಾಲಯ ಹೆಚ್ಚು ಪ್ರಸಿದ್ಧಿ ಹೊಂದಿದೆ. ಕುಕ್ಕೆ ಸುಬ್ರಹ್ಮಣ್ಯ ಸ್ವಾಮಿ ದೇವಾಲಯ ಮಾದರಿಯಲ್ಲಿ ರಾಜ ಗೋಪುರ ನಿರ್ಮಾಣಕ್ಕೆ ಶಾಸಕರು ಸಹಕರಿಸಬೇಕು. ಕ್ಷೇತ್ರವನ್ನು ಪ್ರವಾಸಿ ತಾಣವಾಗಿ ರೂಪಿಸಬೇಕೆಂದು ಕೋರಿದರು.

ಉಪತಹಶೀಲ್ದಾರ್ ಮೋಹನ್, ರಥ ನಿರ್ಮಾಣ ಸಮಿತಿ ಅಧ್ಯಕ್ಷ ಸದಾಶಿವಯ್ಯ, ಕಾರ್ಯದರ್ಶಿ ಜಯದೇವಪ್ಪ, ಖಜಾಂಚಿ ಕುಮಾರಸ್ವಾಮಿ, ಅರ್ಚಕರಾದ ಅಭಿಷೇಕ್, ಪ್ರಸನ್ನ, ಮುಖಂಡರಾದ ಡಿ.ಕೆ. ದಿನೇಶ್, ಎನ್.ಡಿ.ಶಿವಕುಮಾರ್, ರಾಜು, ಹುಲಿಕೆರೆ ಸಂಪತ್ ಕುಮಾರ್ ಇತರರಿದ್ದರು.

# ವ್ಯಕ್ತಿತ್ವದಿಂದಲೇ ಜನಮನ ಗೆದ್ದಿದ್ದ ಅಪ್ಪು ನೆನಪು ಅಮರ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ನಟ ಪುನೀತ್ ರಾಜಕುಮಾರ್ ಅವರು ಸಿನಿಮಾ ನಟ ಮಾತ್ರವಲ್ಲದೆ ನಡೆ, ನುಡಿ ಹಾಗೂ ಸೌಮ್ಯ ಸ್ವಭಾವದ ವ್ಯಕ್ತಿತ್ವದ ಮೂಲಕ ಎಲ್ಲರ ಮನಸ್ಸು ಗೆದ್ದಿದ್ದರು. ಆರೋಗ್ಯಕರ ಸಮಾಜ ನಿರ್ಮಾಣಕ್ಕೆ ಪೂರಕವಾಗುವಂತಹ ಸ್ಫೂರ್ತಿದಾಯಕ ಪಾತ್ರಗಳಿಂದ ಮನೆ ಮಾತಾಗಿದ್ದಾರೆ ಎಂದು ಸಾಹಿತಿ ಡಾ.ಚಂದ್ರು ನಿಂಬೇಹಳ್ಳಿ ಹೇಳಿದರು.

ತಾಲ್ಲೂಕಿನ ಹಿರೀಸಾವೆ ಗ್ರಾಮದ ಶ್ರೀಕಂಠಯ್ಯ ವೃತ್ತದಲ್ಲಿ ಪುನೀತ್ ರಾಜಕುಮಾರ್ ಅಭಿಮಾನಿಗಳ ಬಳಗದಿಂದ ಹಮ್ಮಿಕೊಂಡಿದ್ದ ಡಾ. ಪುನೀತ್ ರಾಜಕುಮಾರ್ ಅವರ 51ನೇ ಹುಟ್ಟುಹಬ್ಬದ ಆಚರಣೆಯಲ್ಲಿ ಮಾತನಾಡಿ, ಮನುಷ್ಯ ಬದುಕಿದ್ದಾಗ ಮಾಡಿದ ಸಮಾಜಮುಖಿ ಸೇವೆಯು ಕಾಲದ ನಂತರವೂ ಚಿರವಾಗಿ ಉಳಿಯಲಿದೆ ಎಂಬುದಕ್ಕೆ ಪುನೀತ್ ರಾಜಕುಮಾರ್ ಅವರ ಬದುಕು ಸಾಕ್ಷಿಯಾಗಿದೆ ಎಂದರು.

ಚನ್ನರಾಯಪಟ್ಟಣ ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಬಿ.ಎನ್.ಮಂಜುನಾಥ್ ಮಾತನಾಡಿ, ನಿಷ್ಠಾವಂತ ಜಿಲ್ಲಾಧಿಕಾರಿ, ದಕ್ಷ ಪೊಲೀಸ್ ಹಾಗೂ ಮಾನವೀಯ ಮೌಲ್ಯಗಳನ್ನು ಪ್ರತಿಬಿಂಬಿಸುವ ಸಾಂಸಾರಿಕ ಸಿನಿಮಾಗಳು ಸೇರಿ ಎಲ್ಲಾ ಮಾದರಿಯ ಪಾತ್ರಗಳನ್ನು ನಿರ್ವಹಿಸುವ ಮೂಲಕ ಸಮಾಜದ ಗಮನ ಸೆಳೆದ ಮಹಾನ್ ವ್ಯಕ್ತಿ ಪುನೀತ್ ರಾಜಕುಮಾರ್ ಎಂದು ಶ್ಲಾಘಿಸಿದರು.

ಮಾನವ ಹಕ್ಕುಗಳ ತನಿಖಾ ಸಮಿತಿಯ ತಾಲ್ಲೂಕು ಕಾರ್ಯದರ್ಶಿ ಎಂ.ಜಿ.ನಂಜೇಗೌಡ ಮಾತನಾಡಿ, ಅಭಿಮಾನಿಗಳೇ ದೇವರು ಎನ್ನುವ ಮೂಲಕ ಅಪಾರ ಅಭಿಮಾನಿ ಬಳಗವನ್ನು ಹೊಂದಿದ್ದ ವರನಟ ಡಾ.ರಾಜಕುಮಾರ್ ಅವರ ಪುತ್ರ ಪುನೀತ್ ರಾಜಕುಮಾರ್ ಅವರು ತಂದೆಯ ಹಾದಿಯಲ್ಲಿಯೇ ಸಾಗಿದರು. ಸಂಕಷ್ಟದಲ್ಲಿ ಇರುವವರಿಗೆ ನೆರವಾಗುವ ಮೂಲಕ ಸಮಾಜ ಸೇವೆಯಲ್ಲಿ ನಿರತರಾಗಿದ್ದರು. ಅವರ ಹೆಸರು ಸದಾಕಾಲ ಕನ್ನಡಿಗರ ಮನಸ್ಸಿನಲ್ಲಿ ಉಳಿಯಲಿದೆ ಎಂದರು.

ರೈತ ಸಂಘದ ಅಧ್ಯಕ್ಷ ಬಾಲಣ್ಣ, ಮಾನವ ಹಕ್ಕುಗಳ ತನಿಖಾ ಸಮಿತಿ ರಾಜ್ಯ ಪ್ರಧಾನ ಕಾರ್ಯದರ್ಶಿ ರಾಶಿಕ್ ಗೌಡ, ಪ್ರಗತಿ ವಾಸು, ಬ್ಯಾಂಗಲ್ ಮಹೇಶ್, ಪಿಎಲ್‌ಡಿ ಬ್ಯಾಂಕ್ ಮಾಜಿ ಅಧ್ಯಕ್ಷ ಕಿರಣ್, ಜಿ.ಪರಮೇಶ್ವರ ಯುವಕರ ಸಂಘದ ಜಿಲ್ಲಾಧ್ಯಕ್ಷ ಮಂಜುನಾಥ ಮೌರ್ಯ ಇತರರಿದ್ದರು.

# ನುಗ್ಗೇಹಳ್ಳಿ ಆಂಜನೇಯ ದೇಗುಲದಲ್ಲಿ ವಿಶೇಷ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕಿನ ನುಗ್ಗೇಹಳ್ಳಿ ಗ್ರಾಮದ ಪುರಾಣ ಪ್ರಸಿದ್ಧ ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ ದೇವಾಲಯದಲ್ಲಿ ಯುಗಾದಿ ಪ್ರಯುಕ್ತ ವಿಶೇಷ ಪೂಜೆ, ಉತ್ಸವ ಹಾಗೂ ಅನ್ನ ಸಂತರ್ಪಣೆ ನಡೆಯಿತು.

ಯುಗಾದಿ ಅಮಾವಾಸ್ಯೆಯ ಪ್ರಯುಕ್ತ ದೇವಾಲಯದಲ್ಲಿ ಬೆಳಿಗ್ಗೆಯಿಂದ ಅಭಿಷೇಕ, ಪೂಜೆ ಹಾಗೂ ಹೂವಿನ ಅಲಂಕಾರ ಸೇರಿ ವಿವಿಧ ಪೂಜೆಗಳು ನೆರವೇರಿದವು. ನೂರಾರು ಭಕ್ತರು ದೇವರ ದರ್ಶನ ಪಡೆದರು.

ಗ್ರಾಮದ ರಾಜ ಬೀದಿಗಳಲ್ಲಿ ಶ್ರೀ ಕಲ್ಯಾಣಿ ಆಂಜನೇಯಸ್ವಾಮಿ ಮತ್ತು ಒಂಟೆ ಉತ್ಸವ ಮೂರ್ತಿಯ ಉತ್ಸವ ಮಂಗಳವಾದ್ಯದೊಂದಿಗೆ ನೆರವೇರಿತು. ಜೊತೆಗೆ ಶ್ರೀ ಲಕ್ಷ್ಮಿನರಸಿಂಹ ಸ್ವಾಮಿ ,ಶ್ರೀ ಸದಾಶಿವ ಸ್ವಾಮಿ, ನುಗ್ಗೇಹಳ್ಳಿ ಅಮ್ಮನವರ ದೇವಾಲಯ ಸೇರಿ ಜಂಬೂರು ಗ್ರಾಮದ ಶ್ರೀ ಶನೇಶ್ವರ ಸ್ವಾಮಿ ದೇವಸ್ಥಾನಗಳಲ್ಲಿ ಪೂಜೆ ನಡೆಯಿತು.



ಶ್ರೀ ಕ್ಷೇತ್ರ ಧರ್ಮಸ್ಥಳ ಪಾದಯಾತ್ರೆಗಳ ಸೇವಾ ಸಮಿತಿ ಅಧ್ಯಕ್ಷ ಹೋಟೆಲ್ ರಾಜಣ್ಣ, ದೇವಾಲಯದ ಮುಖ್ಯ ಅರ್ಚಕ ರವಿಶಾಚಾರ್, ಗ್ರಾಮಸ್ಥರಾದ ಎನ್.ಎಸ್. ಲಕ್ಷ್ಮಣ್, ಶಂಕರ್, ಲೋಕೇಶ್, ಅಶೋಕ್, ಸತೀಶ್ ಯಾದವ್, ಮಿಠಾಯಿ ಜಯಣ್ಣ, ಮಂಜು, ದೇವರಾಜ್, ಉಮೇಶ ಆಚಾರ್, ಶಿವಶಂಕರ್ ಇತರರಿದ್ದರು.




# ಚೈತನ್ಯ ವೃದ್ಧಾಶ್ರಮಕ್ಕೆ ವಿದ್ಯಾರ್ಥಿನಿಯರ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ನಗರದ ಆರ್.ಸಿ. ರಸ್ತೆ ಗಂಧದಕೋಠಿ ಆವರಣದಲ್ಲಿರುವ ಮಹಿಳಾ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಮಾಜಶಾಸ್ತ್ರ ವಿಭಾಗದ ವತಿಯಿಂದ ಈಚೆಗೆ ಶೈಕ್ಷಣಿಕ ಅಧ್ಯಯನದ ಭಾಗವಾಗಿ ನಗರದ ಹೊರ ವಲಯದ ಚೈತನ್ಯ ವೃದ್ಧಾಶ್ರಮಕ್ಕೆ ವಿದ್ಯಾರ್ಥಿನಿಯರು ಭೇಟಿ ನೀಡಿದರು. ವೃದ್ಧಾಶ್ರಮದಲ್ಲಿರುವ ಹಿರಿಯ ಸದಸ್ಯರೊಂದಿಗೆ ಸಂವಾದ ನಡೆಸಿದ ಮಕ್ಕಳು, ಆಶ್ರಮದಲ್ಲಿರುವ ಹಿರಿಯರೊಂದಿಗೆ ಅವರ ಸ್ವವಿವರದ ಬಗ್ಗೆ ಮಾಹಿತಿ ಪಡೆದುಕೊಂಡರು. ನಂತರ ವಿದ್ಯಾರ್ಥಿಗಳು ತಮ್ಮ ಶೈಕ್ಷಣಿಕ ಅನುಕೂಲಕ್ಕಾಗಿ ಹಲವು ಪ್ರಶ್ನೆಗಳಿಗೆ ಉತ್ತರ ಪಡೆದುಕೊಂಡರು. ಕಾಲೇಜಿನ ಅಧ್ಯಾಪಕ ವೆಂಕಟೇಶ್ ಅವರ ಮಾರ್ಗದರ್ಶನದಲ್ಲಿ ವಿದ್ಯಾರ್ಥಿಗಳು ಆಶ್ರಮಕ್ಕೆ ಭೇಟಿ ನೀಡಿದ್ದರು.

# ಸಕಲೇಶಪುರದಲ್ಲಿ ಶುಕ್ರವಾರವೇ ರಂಜಾನ್ ಆಚರಣೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ: ಚಂದ್ರದರ್ಶನ ವಿಳಂಬವಾದ ಹಿನ್ನೆಲೆಯಲ್ಲಿ ದೇಶದ ಬಹುತೇಕ ಭಾಗಗಳಲ್ಲಿ ಈದ್-ಉಲ್-ಫಿತರ್ (ರಂಜಾನ್ ಹಬ್ಬ)ವನ್ನು ಶನಿವಾರಕ್ಕೆ ಮುಂದೂಡಲಾಗಿದ್ದರೂ, ತಾಲೂಕಿನ ಕೆಲವು ಮಸೀದಿಗಳಲ್ಲಿ ಶುಕ್ರವಾರವೇ ಹಬ್ಬ ಆಚರಿಸಲಾಯಿತು.

ಗುರುವಾರ ಸಂಜೆ ಚಂದ್ರ ಕಾಣಿಸದ ಕಾರಣ ಶುಕ್ರವಾರ ಆಚರಿಸಬೇಕಿದ್ದ ಈದ್ ಹಬ್ಬವನ್ನು ದೇಶದ ಹಲವೆಡೆ ಶನಿವಾರಕ್ಕೆ ಮುಂದೂಡಲಾಯಿತು. ರಂಜಾನ್ ಉಪವಾಸ ಮಾಸದ ಅಂತ್ಯವನ್ನು ಸೂಚಿಸುವ ಈ ಹಬ್ಬಕ್ಕೆ ಚಂದ್ರದರ್ಶನ ಅತ್ಯಂತ ಪ್ರಮುಖವಾಗಿದ್ದು, ಇಸ್ಲಾಮಿಕ್ ಪಂಚಾಂಗದ ಪ್ರಕಾರ ಶವ್ವಾಲ್ ತಿಂಗಳ ಆರಂಭವನ್ನು ಚಂದ್ರನ ಕಾಣಿಕೆಯಿಂದಲೇ ನಿರ್ಧರಿಸಲಾಗುತ್ತದೆ. ಇದೇ ಕಾರಣದಿಂದ ವಿಶ್ವದ ವಿವಿಧ ಭಾಗಗಳಲ್ಲಿ ಈದ್ ಹಬ್ಬವನ್ನು ಬೇರೆ ಬೇರೆ ದಿನಗಳಲ್ಲಿ ಆಚರಿಸುವ ಪದ್ಧತಿ ಇದೆ.

ಈ ವರ್ಷ ರಂಜಾನ್ ಮಾಸವು 30 ದಿನಗಳವರೆಗೆ ಮುಂದುವರಿದಿದೆ. ಇಸ್ಲಾಮಿಕ್ ಕ್ಯಾಲೆಂಡರ್ ಪ್ರಕಾರ ಪ್ರತಿ ತಿಂಗಳು 29 ಅಥವಾ 30 ದಿನಗಳಿರುತ್ತವೆ. ಇದು ಸಂಪೂರ್ಣವಾಗಿ ಚಂದ್ರದರ್ಶನದ ಮೇಲೆ ಅವಲಂಬಿತವಾಗಿರುತ್ತದೆ. ಕಳೆದ ವರ್ಷ ರಂಜಾನ್ 29 ದಿನಗಳಷ್ಟೇ ಮುಂದುವರಿದಿತ್ತು.

ತಾಲೂಕಿನ ಹಲಸುಲಿಗೆ, ಆಚಂಗಿ, ಕೊಲ್ಲಹಳ್ಳಿ ಸೇರಿ ಕೆಲವು ಮಸೀದಿಗಳಲ್ಲಿ ಶುಕ್ರವಾರವೇ ವಿಶೇಷ ಪ್ರಾರ್ಥನೆ ನೆರವೇರಿಸಿ ರಂಜಾನ್ ಹಬ್ಬವನ್ನು ಆಚರಿಸಲಾಯಿತು. ಮುಸ್ಲಿಂ ಸಮುದಾಯದವರು ಹೊಸ ಬಟ್ಟೆ ಧರಿಸಿ, ಪರಸ್ಪರ ಶುಭಾಶಯ ವಿನಿಮಯ ಮಾಡಿ ಹಬ್ಬವನ್ನು ಸಂಭ್ರಮದಿಂದ ಆಚರಿಸಿದರು.

ಮುಖ್ಯವಾಗಿ ಮುಸ್ಲಿಂರಲ್ಲಿರುವ ಬ್ಯಾರಿ ಸಮುದಾಯದವರು ಬಹುತೇಕವಾಗಿ ಶುಕ್ರವಾರವೇ ಹಬ್ಬ ಆಚರಿಸಿದ್ದು, ಉಳಿದ ಮುಸ್ಲಿಂ ಸಮುದಾಯದವರು ಶನಿವಾರ ಈದ್ ಆಚರಿಸಲು ಸಜ್ಜಾಗಿದ್ದಾರೆ.

ಹಬ್ಬದ ಸಂದರ್ಭದಲ್ಲಿ ಅಹಿತಕರ ಘಟನೆ ನಡೆಯದಂತೆ ಮುನ್ನೆಚ್ಚರಿಕಾ ಕ್ರಮವಾಗಿ, ಹಬ್ಬ ಆಚರಿಸಿದ ಮಸೀದಿಗಳ ಸುತ್ತಮುತ್ತ ಬಿಗಿ ಪೊಲೀಸ್ ಬಂದೋಬಸ್ತ್ ಕೈಗೊಳ್ಳಲಾಗಿದೆ.



# ಮೇಲೇರದ ತಂಬಾಕು ದರ : ಬೆಳೆಗಾರರು ಕಂಗಾಲು

## ಗಂಭೀರವಾಗಿ ಪರಿಗಣಿಸದ ಸರ್ಕಾರ | ನಷ್ಟದ ಸುಳಿಯಲ್ಲಿ ರೈತರು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಅರಕಲಗೂಡು: ಕೇಂದ್ರ ಸರ್ಕಾರ ಮುಕ್ತ ಮಾರುಕಟ್ಟೆ ವ್ಯವಸ್ಥೆ ಜಾರಿಗೊಳಿಸಿ ನೇರ ಖರೀದಿಗೆ ಅವಕಾಶ ಒದಗಿಸದ ಪರಿಣಾಮ ಚಿನ್ನದ ದರಕ್ಕೆ ಮಾರಾಟವಾಗಬೇಕಿದ್ದ ಕರ್ನಾಟಕದ ವರ್ಜಿನಿಯಾ ಹೊಗೆಸೊಪ್ಪು ವೈಜ್ಞಾನಿಕ ಬೆಲೆಯಿಂದ ವಂಚಿತವಾಗಿ ಕೆಲವೇ ಬಂಡವಾಶಾಹಿ ಕಂಪನಿಗಳ ವರ್ತಕರ ಕಪಿಮುಷ್ಟಿಗೆ ಸಿಲುಕಿ ಕಷ್ಟಪಟ್ಟು ಉತ್ಪಾದಿಸಿದ ಅನ್ನದಾತರು ಲಾಭ ಕಂಡುಕೊಳ್ಳಲಾಗದೆ ಆರ್ಥಿಕವಾಗಿ ತೀವ್ರ ನಷ್ಟ ಅನುಭವಿಸುವಂತಾಗಿದೆ ಎನ್ನುವ ಆರೋಪ ಕೇಳಿಬಂದಿದೆ.

ತಾಲೂಕಿನ ರಾಮನಾಥಪುರ ತಂಬಾಕು ಮಾರುಕಟ್ಟೆಯಲ್ಲಿ ಬೆಲೆ ಪಾತಾಳ ಕಂಡಿದ್ದು ರೈತರಿಗೆ ಶಾಕ್ ನೀಡುತ್ತಿದೆ. ದಿನೇ ದಿನೇ ಇಳಿಕೆ ದಾಖಲಿಸುತ್ತಿರುವ ತಂಬಾಕಿದ ದರ ಏರಿಕೆ ಕಾಣುವ ಲಕ್ಷಣಗಳು ಕಾಣಿಸುತ್ತಿಲ್ಲ. ಆರಂಭದಲ್ಲಿ 320 ರೂಪಾಯಿಗೆ ಗರಿಷ್ಟ ದರಕ್ಕೆ ತಲುಪಿದ್ದ ತಂಬಾಕಿನ ಬೆಲೆ ಮತ್ತಷ್ಟು ಏರಿಕೆ ಉಂಟಾಗಲಿದೆ ಎನ್ನುವ ಚರ್ಚೆ ಚಾಲ್ತಿಯಲ್ಲಿತ್ತು. ದುರಾದೃಷ್ಟವಶಾತ್ ಬೆಲೆ ಸುಧಾರಣೆ ಕಾಣುವುದರ ಹೊರತಾಗಿ ಇಳಿಕೆಯತ್ತ ಸಾಗುತ್ತಿದ್ದು ಕನಿಷ್ಟ ದರ 160 ರೂಪಾಯಿಗೆ ಕುಸಿತ ಕಂಡು ಬೆಳೆಗಾರರನ್ನು ಬೆಚ್ಚಿ ಬೀಳಿಸಿದೆ.

ಇನ್ನು ಕೆಳ ದರ್ಜೆಯ ತಂಬಾಕು ಖರೀದಿಸಲು ಕಂಪನಿಗಳ ವರ್ತಕರು ಹಿಂದೇಟು ಹಾಕುತ್ತಿದ್ದಾರೆ. ಎನ್.ಒ.ಬಿ. ಎನ್.ಡಿ.ಜಿ ಕ್ಯಾರಂ, ಕಪ್ಪು ತರಗು ಮತ್ತು ಸಲೈನ್ ಗ್ರೇಡ್ ಹೊಗೆಸೊಪ್ಪು ಮಾರಾಟವಾಗುತ್ತಿಲ್ಲ. ಅಂತಹ ಬೇಲ್ ಗಳನ್ನು ರೈತರು ಮಾರಾಟಕ್ಕೆ ತರದಂತೆ ಮಾರುಕಟ್ಟೆ ಪ್ರಕಟಣೆ ಹೊರಡಿಸಿದೆ. ಸದ್ಯಕ್ಕೆ ಶೇ. 58ರಷ್ಟು ತಂಬಾಕು ಖರೀದಿಯಾಗಿದೆ. ದರ ಸುಧಾರಣೆ ಆಗುವ ಆಸೆಯಿಂದ ಹಲವಾರು ರೈತರು ತಂಬಾಕು ಮಾರಾಟ ಮಾಡಲು ಆರಂಭದಲ್ಲಿ ಮುಂದಾಗಲಿಲ್ಲ. ಇದೀಗ ಬೆಲೆ ಇಳಿಕೆಯಾಗಿ ಮಾರುಕಟ್ಟೆಗೆ ಬೇಲ್ ಗಳನ್ನು ಮಾರಾಟ ಮಾಡದೆ ರೈತರು ತಲೆಮೇಲೆ ಕೈಹೊತ್ತು ಕೂರುವಂತಾಗಿದೆ.

ಕರ್ನಾಟಕದಲ್ಲಿ ಉತ್ಪಾದಿಸುವ ಉತ್ಕೃಷ್ಟ ದರ್ಜೆಯ ವರ್ಜಿನಿಯಾ ತಂಬಾಕು ಖರೀದಿಸುವ ಕಂಪನಿಗಳ ವರ್ತಕರು ಬಹುತೇಕ ಆಂಧ್ರಪ್ರದೇಶದವೇ ಆಗಿದ್ದು ಬೆಲೆ ತಾರತಮ್ಯ ಎಸಗುತ್ತಿರುವುದು ಅಂಕಿ ಅಂಶಗಳನ್ನು ಗಮನಿಸಿದಾಗ ಮೇಲ್ನೋಟಕ್ಕೆ ಸ್ಪಷ್ಟವಾಗಿ ಗೋಚರಿಸುತ್ತದೆ. ಅಧಿಕಾರಿಗಳು ಮಾಹಿತಿ ನೀಡುವ ಪ್ರಕಾರ ಕಳೆದ ಬಾರಿ ಆಂಧ್ರಪ್ರದೇಶದಲ್ಲಿ ಒಂದು ಕೆಜಿ ಹೊಗೆಸೊಪ್ಪು ಬೆಲೆ 450 ರೂಪಾಯಿಗೆ ಮಾರಾಟವಾಯಿತು. ಆದರೆ ಅಲ್ಲಿಗಿಂತಲೂ ಉತ್ಕೃಷ್ಟ ದರ್ಜೆಯ ತಂಬಾಕು ಉತ್ಪಾದಿಸುವ ಕರ್ನಾಟಕದ ವರ್ಜಿನಿಯಾ ಹೊಗೆಸೊಪ್ಪು ಬೆಲೆ ಆಂಧ್ರಕ್ಕೆ ಹೋಲಿಸಿದರೆ ತೀರ ಕಡಿಮೆ. ಈ ಬಾರಿ ಆಂಧ್ರಪ್ರದೇಶದಲ್ಲಿ ಸಿಕ್ಕಷ್ಟೇ ದರ ಇಲ್ಲಿಯೂ ಸಿಗಲಿದೆ ಎನ್ನುವ ಆಶಾಭಾವನೆ ಹೊಂದಿದ್ದ ರೈತರಿಗೆ ಬೆಲೆ ಕುಸಿತ ತಣ್ಣೀರೆರಚಿದೆ.

> ಕರ್ನಾಟಕದಲ್ಲಿ ಈ ಬಾರಿ 85 ಮಿಲಿಯನ್ ಕೆಜಿ ತಂಬಾಕು ಖರೀದಿ ನಿಗದಿಪಡಿಸಲಾಗಿದೆ. ಈ ಪೈಕಿ ಶೇ. 50ರಷ್ಟು ಹೊಗೆಸೊಪ್ಪು ಐಟಿಸಿ ಕಂಪನಿ ಕೊಳ್ಳುತ್ತಿದೆ. ನೇರ ಖರೀದಿ ವ್ಯವಸ್ಥೆ ಜಾರಿಗೆ ಕೇಂದ್ರ ಸರ್ಕಾರ ಅಗತ್ಯ ಕ್ರಮ ಕೈಗೊಳ್ಳಬೇಕು. ಬೆಲೆ ಏರಿಕೆ ಮಾಡುವಂತೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ ಮತ್ತು ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಅವರು ಕೇಂದ್ರ ವಾಣಿಜ್ಯ ಸಚಿವರನ್ನು ಭೇಟಿ ಮಾಡಿದ್ದು ಕೇಂದ್ರ ಸರ್ಕಾರ ಏನು ಕ್ರಮ ವಹಿಸುತ್ತದೆ ಎಂಬುದನ್ನು ಕಾದು ನೋಡಬೇಕಿದೆ. ಆಂಧ್ರಪ್ರದೇಶದಲ್ಲಿ ಕಳೆದ ಸಲ ಒಂದು ಕೆಜಿ ತಂಬಾಕು 450 ರೂಪಾಯಿಗೆ ಮಾರಾಟವಾಗಿತ್ತು. ಕರ್ನಾಟಕದಲ್ಲಿ ಈ ಬಾರಿ ಉತ್ಪಾದನೆ ಹೆಚ್ಚಿದ್ದು ಬೇಡಿಕೆ ಇಲ್ಲದೆ ಬೆಲೆ ಕುಸಿದಿದೆ.
>
> **-ಮಾರಣ್ಣ, ತಂಬಾಕು ಮಾರುಕಟ್ಟೆ ಪ್ರಾದೇಶಿಕ ವ್ಯವಸ್ಥಾಪಕ**

ದೇಶದಲ್ಲಿ ಮೊದಲಿಗೆ ಆಂಧ್ರಪ್ರದೇಶದಲ್ಲಿ ತಂಬಾಕು ಉತ್ಪಾದಿಸುತ್ತಿದ್ದು ಅಲ್ಲಿನ ವರ್ತಕರು ಮಾರುಕಟ್ಟೆಯಲ್ಲಿ ಖರೀದಿಸಿದ ಹೊಗೆಸೊಪ್ಪನ್ನು ವಿದೇಶಗಳಿಗೆ ರಫ್ತು ಮಾಡುತ್ತಿದ್ದರು. ತದನಂತರ ಹೊಗೆಸೊಪ್ಪು ಬೆಳೆ ಈ ಭಾಗಕ್ಕೆ ಕಾಲಿಟ್ಟ ಬಳಿಕ ಇಲ್ಲಿನ ಮಾರುಕಟ್ಟೆಗಳಲ್ಲಿಯೂ ಆಂಧ್ರಪ್ರದೇಶದ ವರ್ತಕರು ತಂಬಾಕು ಖರೀದಿಸಲಾರಂಭಿಸಿದರು. ಅಂದಿನಿಂದಲೂ ಎರಡು ರಾಜ್ಯಗಳಿಗೆ ಹೋಲಿಕೆ ಮಾಡಿದರೆ ಬೆಲೆಯಲ್ಲಿ ತಾರತಮ್ಯ ಮಾಡುತ್ತಿರುವುದು ಎದ್ದು ಕಾಣಿಸುತ್ತಿದೆ. ಈ ಭಾಗದಲ್ಲಿ ಮಾರುಕಟ್ಟೆ ಮೇಲೆ ಹಿಡಿತ ಸಾಧಿಸಿದ ವರ್ತಕರು ಮನಸ್ಸೋ ಇಚ್ಛೆ ಬೆಲೆಗೆ ಕೊಳ್ಳಲಾರಂಭಿಸಿದರು. ಬೆಳೆಗಾರರ ಹಿತ ಕಾಯಬೇಕಿದ್ದ ತಂಬಾಕು ಮಂಡಳಿ ಕೈಕಟ್ಟಿ ಕುಳಿತಿರುವುದು ಗುಟ್ಟೇನಲ್ಲ. ತಂಬಾಕು ಕೊಳ್ಳುವ ಇತರೆ ಕಂಪನಿಗಳಿಗೆ ಹೋಲಿಕೆ ಮಾಡಿದರೆ ಐಟಿಸಿ ಕಂಪನಿ ಅಧಿಕವಾಗಿ ಖರೀದಿಸುತ್ತಿದ್ದು ಮಾರುಕಟ್ಟೆಯಲ್ಲಿ ಬೆಲೆ ನಿಯಂತ್ರದ ಮೇಲೂ ಬಿಗಿ ಹಿಡಿತ ಸಾಧಿಸುತ್ತಿದೆ.

ಈ ಬಾರಿ ಮಾರುಕಟ್ಟೆಯಲ್ಲಿ ಹಿಂದೆಂದೂ ಕಂಡರಿಯದಷ್ಟು ಬೆಲೆ ಪಾತಾಳ ಕಂಡಿದೆ. ಬೆಲೆ ಕುಸಿತದಿಂದ ರೋಸಿಹೋದ ರೈತರು ಹಲವಾರು ಸಲ ಮಾರುಕಟ್ಟೆ ಬಂದ್ ಮಾಡಿಸಿ ಹರಾಜು ಪ್ರಕ್ರಿಯೆ ಸ್ಥಗಿತಗೊಳಿಸಿದರೂ ದರ ಏರಿಕೆ ಮಾಡದೆ ವರ್ತಕರು ಕ್ಯಾರೆ ಎನ್ನುತ್ತಿಲ್ಲ. ಕಳೆದ ವಾರ ರೈತರು ಹೊಗೆಸೊಪ್ಪಿಗೆ ಬೆಂಕಿ ಹಚ್ಚಿ ಪ್ರತಿಭಟಿಸಿ ಆಕ್ರೋಶ ವ್ಯಕ್ತಪಡಿಸಿದರೂ ನರಿ ಕೂಗು ಗಿರಿ ಮುಟ್ಟಿತೇ ಎನ್ನುವಂತಾಗಿದೆ. ಮಾರುಕಟ್ಟೆಗೆ ಸಂಸದ ಶ್ರೇಯಸ್ ಪಟೇಲ್ ಭೇಟಿ ನೀಡಿ ಉತ್ತಮ ಬೆಲೆ ನೀಡುವಂತೆ ಸೂಚಿಸಿದರೂ ವರ್ತಕರು ಕಿವಿಗೊಡುತ್ತಿಲ್ಲ. ಇತ್ತೀಚೆಗೆ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡ, ಕೇಂದ್ರ ಸಚಿವ ಎಚ್.ಡಿ. ಕುಮಾರಸ್ವಾಮಿ ಹಾಗೂ ಸ್ಥಳೀಯ ಶಾಸಕರು ದೆಹಲಿಯಲ್ಲಿ ಕೇಂದ್ರ ವಾಣಿಜ್ಯ ಸಚಿವ ಪಿಯೂಷ್ ಗೋಯೆಲ್ ಅವರನ್ನು ಭೇಟಿ ಮಾಡಿ ತಂಬಾಕು ಬೆಳೆಗಾರರ ಸಂಕಷ್ಟಕ್ಕೆ ಸ್ಪಂದಿಸಿ ಬೆಲೆ ಏರಿಕೆ ಮಾಡುವಂತೆ ಮನವಿ ಮಾಡಿದರೂ ಪ್ರಯೋಜ ಆಗಿಲ್ಲ. ಯುಗಾದಿಗೆ ಹಬ್ಬದ ಸಿಹಿ ಸಂಭ್ರಮದಲ್ಲಿರಬೇಕಾದ ರೈತರಿಗೆ ತಂಬಾಕು ಬೆಲೆ ಕುಸಿತ ಕಹಿ ಅನುಭವ ನೀಡುತ್ತಿದೆ.

> ಪ್ರಪಂಚದಲ್ಲಿಯೇ ಮುಕ್ತ ಮಾರುಕಟ್ಟೆ ವ್ಯವಸ್ಥೆ ಜಾರಿಯಲ್ಲಿದೆ. ಆದರೆ ಭಾರತ ಸರ್ಕಾರ ವಾಣಿಜ್ಯ ಪದಾರ್ಥಗಳ ವ್ಯಾಪಾರ ವಹಿವಾಟನ್ನು ಕೆಲವೇ ದೇಶಗಳಿಗೆ ಸೀಮಿತಗೊಳಿಸಿದೆ. ಕೆಲವೇ ಕಂಪನಿಗಳನ್ನು ನೆಚ್ಚಿಕೊಂಡು ಕೂರದೆ ಬೇಡಿಕೆ ಇರುವ ದೇಶಗಳಿಗೆ ತಂಬಾಕು ರಫ್ತು ಮಾಡಲು ಕೇಂದ್ರ ಸಚಿವಾಲಯ ಕಿಂಚಿತ್ತೂ ತಲೆಕೆಡಿಸಿಕೊಳ್ಳುತ್ತಿಲ್ಲ. ಕಂಪನಿಗಳ ಮೂಲಕ ತಂಬಾಕು ಮೇಳ ನಡೆಸಿ ನೇರ ಖರೀದಿಯಲ್ಲಿ ಹೆಚ್ಚು ವಿದೇಶಿ ಕಂಪನಿಗಳು ಪಾಲ್ಗೊಳ್ಳುವಂತೆ ಮುಕ್ತ ಮಾರುಕಟ್ಟೆ ಸೌಲಭ್ಯ ಕಲ್ಪಿಸಿ ಬೆಳೆಗಾರರಿಗೆ ನೆರವಾಗಬೇಕು. ಇದರಿಂದ ಬೆಳೆ ಉತ್ಪಾದಕ ರೈತರಿಗೆ ಲಾಭ ಮಾಡಿಕೊಡಬಹುದು. ಆಂಧ್ರಪ್ರದೇಶದ ವರ್ತಕರು ತಂಬಾಕು ಬೆಲೆಯಲ್ಲಿ ತಾರತಮ್ಯ ಮಾಡಿ ಕರ್ನಾಟಕದ ರೈತರಿಗೆ ಅನ್ಯಾಯ ಮಾಡಿಕೊಂಡು ಬಂದಿರುವುದು ಹಿಂದಿನಿಂದಲೂ ಬೆಳೆದು ಬಂದಿದೆ. ಈ ಅನೀತಿ ಹೋಗಲಾಡಿಸಬೇಕು.
>
> **- ಎಸ್.ವಿ. ಯೋಗಣ್ಣ, ಹೊಗೆಸೊಪ್ಪು ಬೆಳೆಗಾರ**

# ದೇಶದ ಬೆಳವಣಿಗೆಯಲ್ಲಿ ಮಹಿಳೆಯರ ಪಾತ್ರ ಹೆಚ್ಚು



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ದೇಶದ ಬೆಳವಣಿಗೆಯಲ್ಲಿ ಮಹಿಳೆಯರು ಸಹ ಪ್ರಮುಖ ಪಾತ್ರ ವಹಿಸುತ್ತಿದ್ದಾರೆ ಎಂದು ಶಾಸಕ ಎಚ್.ಕೆ.ಸುರೇಶ್ ಹೇಳಿದರು.

ಇಲ್ಲಿನ ಒಕ್ಕಲಿಗರ ಕಲ್ಯಾಣ ಮಂಟಪದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ, ತಾಲ್ಲೂಕು ಸ್ತ್ರೀ ಶಕ್ತಿ ಒಕ್ಕೂಟ, ಶಿಲ್ಪಕಲಾ ಮಹಿಳಾ ಒಕ್ಕೂಟ ಹಾಗೂ ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದಿಂದ ಆಯೋಜಿಸಿದ್ದ ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರತಿ ಸಾಧಕನ ಹಿಂದೆ ಹೇಗೆ ಒಬ್ಬ ಮಹಿಳೆ ಇರುತ್ತಾರೆಯೋ ಹಾಗೆ ಮಹಿಳೆಯರಿಗೂ ಪುರುಷರಾದ ನಾವು ಸಹಕಾರ ನೀಡಬೇಕು. ಮಹಿಳೆ ಒಬ್ಬ ತಾಯಿಯಾಗಿ, ಪತ್ನಿಯಾಗಿ, ಸಹೋದರಿಯಾಗಿ ಈ ದೇಶಕ್ಕೆ ಕಾವಲಾಗಿ, ಕುಟುಂಬ ಮತ್ತು ಸಮಾಜದ ಏಳಿಗೆಗಾಗಿ ದುಡಿಯುತ್ತಾರೆ. ಆದ್ದರಿಂದ ನಾವು ಅವರನ್ನು ಗೌರವಿಸಬೇಕು ಎಂದರು.

ಪುರಸಭೆ ಅಧ್ಯಕ್ಷೆ ಉಷಾ ಸತೀಶ್ ಮಾತನಾಡಿ, ಮಹಿಳೆಯರು ಕುಟುಂಬದ ಜೊತೆಯಲ್ಲಿ ಹಲವು ಕ್ಷೇತ್ರಗಳಲ್ಲಿ ತಮ್ಮದೇ ಆದ ಸಾಧನೆ ಮಾಡುವ ಮೂಲಕ ಪುರುಷರಿಗಿಂತ ನಾವೇನು ಕಮ್ಮಿ ಇಲ್ಲ ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ ಎಂದರು.

ತಾಲ್ಲೂಕು ಸ್ತ್ರಿಶಕ್ತಿ ಒಕ್ಕೂಟದ ಅಧ್ಯಕ್ಷೆ ವೈ.ಆರ್.ಭಾರತೀಗೌಡ ಮಾತನಾಡಿ, ತಾಲ್ಲೂಕಿನ ಹಗರೆಯಲ್ಲಿರುವ ಸ್ತ್ರೀಶಕ್ತಿ ಒಕ್ಕೂಟದ ಭವನಕ್ಕೆ ಶಾಸಕರು ಅನುದಾನ ಒದಗಿಸಿ ಮಹಿಳೆಯರ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುತ್ತಿದ್ದಾರೆ. ಮುಂದಿನ ದಿನಗಳಲ್ಲಿ ತಾಲ್ಲೂಕಿನ ವಿವಿಧ ಸಂಘಗಳಿಗೆ ಅನುದಾನ ನೀಡಿ ಕಾರ್ಯಚಟುವಟಿಕೆಗಳಿಗೆ ಸಹಕಾರ ನಿಡಬೇಕು ಎಂದು ಮನವಿ ಮಾಡಿದರು.

ಮಹಿಳಾ ಮತ್ತು ಮಕ್ಕಳ ಕಲ್ಯಾಣ ಅಭಿವೃದ್ಧಿ ಇಲಾಖೆ ಯೋಜನಾಧಿಕಾರಿ ಇಂಪಾ, ಅಂಗನವಾಡಿ ಕಾರ್ಯಕರ್ತೆಯರ ಮತ್ತು ಸಹಾಯಕಿಯರ ಸಂಘದ ಅಧ್ಯಕ್ಷೆ ಕಾಮಾಕ್ಷಿರಾಜು, ಕಮಲ ಚನ್ನಪ್ಪ, ಉಪನ್ಯಾಸಕಿ ನಾಗಶ್ರೀ, ನಾಗರತ್ನ ಇದ್ದರು.

# ಯುಗಾದಿ ಜಗತ್ತು ಪರಿವರ್ತನೆಯ ಮಹತ್ತರ ಕಾಲ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಯುಗಾದಿಯು ಜಗತ್ತಿನ ಮತ್ತು ಮನಸ್ಸುಗಳ ಪರಿವರ್ತನೆಯ ಕಾಲವಾಗಿದೆ ಎಂದು ಹಾಸನ ನಗರದ ಶ್ರೀ ಕ್ಷೇತ್ರ ಕಾಳಿಕಾಂಬ ಕಮಠೇಶ್ವರ ದೇವಾಲಯದ ಪ್ರಧಾನ ಅರ್ಚಕ ಪುರೋಹಿತ್ ಎನ್. ಪ್ರವೀಣ್ ಕುಮಾರ್ ತಿಳಿಸಿದರು.

ಕಾಳಿಕಾಂಬ ದೇವಾಲಯದಲ್ಲಿ ಯುಗಾದಿ ಹಬ್ಬದ ಪ್ರಯುಕ್ತ ಜರುಗಿದ ಪಂಚಾಂಗ ಶ್ರವಣ ಕಾರ್ಯಕ್ರಮದಲ್ಲಿ ಮಾತನಾಡಿದರು.

ಪರಾಭವ ನಾಮ ಸಂವತ್ಸರವು ಒಟ್ಟು 60 ಸಂವತ್ಸರಗಳಲ್ಲಿ 40ನೇ ಸಂವತ್ಸರವಾಗಿದೆ. ಈ ವರ್ಷದ ರಾಜ ಗುರು ಆಗಿದ್ದು ಮಂತ್ರಿ ಕುಜ ಆಗಿದ್ದಾನೆ. ಗುರು, ಶನಿ, ರಾಹು ಮತ್ತು ಕೇತು ಗ್ರಹಗಳ ಸಂಚಾರದಲ್ಲಿ ಪ್ರಮುಖ ಬದಲಾವಣೆಗಳಾಗಲಿವೆ.

ಗುರು ಗ್ರಹವು ಜೂನ್ ಎರಡರಿಂದ ಕರ್ಕಾಟಕ ರಾಶಿಗೆ ಪ್ರವೇಶಿಸಿ ನಂತರ ಅಕ್ಟೋಬರ್ ಮೂವತ್ತೊಂದರಂದು ಸಿಂಹ ರಾಶಿಗೆ ಮತ್ತು ಜನವರಿಯಲ್ಲಿ ಮತ್ತೆ ಕರ್ಕಾಟಕ ರಾಶಿಗೆ ಮರಳಲಿದೆ. ಶನಿ ಗ್ರಹವು ಮಾರ್ಚ್ ವರೆಗೆ ಮೀನ ರಾಶಿಯಲ್ಲಿ ಇರಲಿದೆ. ರಾಹು ಮತ್ತು ಕೇತುಗಳು ಡಿಸೆಂಬರ್ ನಲ್ಲಿ ಮಕರ ಮತ್ತು ಕರ್ಕಾಟಕ ರಾಶಿಗಳಿಗೆ ಸ್ಥಾನ ಬದಲಾಯಿಸಲಿದೆ.

ಈ ಪರಾಭವ ನಾಮ ಸಂವತ್ಸರದಲ್ಲಿ ಮೇಷ ರಾಶಿಯವರಿಗೆ ಅದೃಷ್ಟ, ಆರ್ಥಿಕ ಅಭಿವೃದ್ಧಿ ಮತ್ತು ಕಾರ್ಯಗಳಲ್ಲಿ ಜಯ ಸಿಗಲಿದೆ. ವೃಷಭ ರಾಶಿಯವರಿಗೆ ಆದಾಯದಲ್ಲಿ ಏರಿಕೆ, ಹೊಸ ಯೋಜನೆಗಳಿಗೆ ಬೆಂಬಲ ಮತ್ತು ರಾಜಕೀಯ ಪ್ರಗತಿ ಇರಲಿದೆ. ಆದಾಗ್ಯೂ ಕೆಲವು ಸಣ್ಣ ಪುಟ್ಟ ಸಮಸ್ಯೆಗಳು ಮತ್ತು ಸವಾಲುಗಳನ್ನು ಎದುರಿಸಬೇಕಾಗುತ್ತದೆ ಎಂದು ಪ್ರವೀಣ್ ಕುಮಾರ್ ನುಡಿದರು.

ದೇವಾಲಯದಲ್ಲಿ ಕಮಠೇಶ್ವರಸ್ವಾಮಿಗೆ ರುದ್ರಾಭಿಷೇಕ, ಕಾಳಿಕಾಂಬೆಗೆ ಪಂಚಾಮೃತ ಅಭಿಷೇಕ ಸೇವೆ ಮಾಡಿ ವಿಶೇಷ ಅಲಂಕಾರ ಮಾಡಲಾಗಿತ್ತು.

ವಿಶ್ವಕರ್ಮ ಸಮಾಜದ ಜಿಲ್ಲಾಧ್ಯಕ್ಷ ಹೆಚ್.ವಿ. ಹರೀಶ್, ತಾಲೂಕು ಉಪಾಧ್ಯಕ್ಷ ಬ್ಯಾಟರಂಗಾಚಾರ್, ಪ್ರಧಾನ ಕಾರ್ಯದರ್ಶಿ ಹೆಚ್.ಎಸ್. ಆನಂದ್, ಯುವಕ ಸಂಘದ ಪ್ರಧಾನ ಕಾರ್ಯದರ್ಶಿ ಟಿ.ಎನ್. ದಿನೇಶ್, ನಿರ್ದೇಶಕರಾದ ಬಿ. ಲೋಕೇಶ್, ರುಕ್ಮಾಂಗದಚಾರ್, ಹಾಸನದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನ ಪ್ರಾಧ್ಯಾಪಕ ಪ್ರೊ. ವಸಂತಕುಮಾರ್ ಮತ್ತು ಶಕುಂತಲಾ ಆಚಾರ್ಯ ಇತರರಿದ್ದರು.

# ವೆಂಕಟೇಶಪುರದಲ್ಲಿ ಎನ್ಎಸ್ಎಸ್ ಸೇವಾ ಶಿಬಿರ ಸಮಾರೋಪ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ತಾಲೂಕಿನ ವೆಂಕಟೇಶಪುರ ಗ್ರಾಮದಲ್ಲಿ ಕೊಣನೂರಿನ ಬಿ.ಎಂ.ಶೆಟ್ಟಿ ಸರ್ಕಾರಿ ಪ್ರಥಮ ದರ್ಜೆ ಕಾಲೇಜು ವತಿಯಿಂದ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಸೇವಾ ಯೋಜನೆಯ ವಾರ್ಷಿಕ ವಿಶೇಷ ಶಿಬಿರದ ಸಮಾರೋಪ ಸಮಾರಂಭ ಇತ್ತೀಚೆಗೆ ನಡೆಯಿತು.

ಸಮಾರೋಪ ಭಾಷಣ ಮಾಡಿದ ಹಾಸನ ವಿಶ್ವವಿದ್ಯಾಲಯದ ರಾಷ್ಟ್ರೀಯ ಸೇವಾ ಯೋಜನೆಯ ಕಾರ್ಯಕ್ರಮ ಸಂಯೋಜನಾಧಿಕಾರಿ ಯೋಗೇಶ್ ಅವರು, ಮಹಾತ್ಮ ಗಾಂಧೀಜಿಯವರ ಕನಸಿನ ಕೂಸು ಎನ್ಎಸ್ಎಸ್. ಯುವ ಜನತೆಯಿಂದ ಈ ದೇಶದ ಬೆಳವಣಿಗೆ ಸಾಧ್ಯ ಎಂಬ ದೃಷ್ಟಿಯಿಂದ ಹುಟ್ಟಿದ ಕಾರ್ಯಕ್ರಮವೇ ಈ ರಾಷ್ಟ್ರೀಯ ಸೇವಾ ಯೋಜನೆ ಶಿಬಿರ. ಕಾಲೇಜು ಮಟ್ಟದಿಂದ ದೇಶಮಟ್ಟದವರೆಗೆ ಸೇವಾ ಯೋಜನೆಯಲ್ಲಿ ಸೇವೆ ಮಾಡಿದರೆ 50 ಅಂಕಗಳನ್ನು ಗಳಿಸಬಹುದು. ಯಾವುದೇ ಪ್ರತಿಫಲಾಪೇಕ್ಷೆ ಇಲ್ಲದೇ ಅರ್ಪಣಾ ಮನೋಭಾವದಿಂದ ಈ ನೆಲಕ್ಕೆ, ಗ್ರಾಮಕ್ಕೆ ಅಥವಾ ಕಾಲೇಜಿಗೆ ಸಮರ್ಪಣಾ ಭಾವದಿಂದ ಸೇವೆಯನ್ನು ಮಾಡುವುದೇ ಎನ್ಎಸ್ಎಸ್ ನ ಧ್ಯೇಯವಾಗಿದೆ ಎಂದು ಹೇಳಿದರು.

ಸಿಡಿಸಿ ಉಪಾಧ್ಯಕ್ಷ ಎಸ್.ಸಿ. ಚೌಡೇಗೌಡ ಮಾತನಾಡಿ, ಅತೀ ಹಿಂದುಳಿದ ಗ್ರಾಮಗಳು ಇನ್ನೂ ಇವೇ ಎಂಬುದನ್ನು ವಿದ್ಯಾರ್ಥಿಗಳಿಗೆ ತಿಳಿಯಲು ಈ ಗ್ರಾಮವನ್ನು ಆಯ್ಕೆ ಮಾಡಲಾಯಿತು. ಗ್ರಾಮೀಣ ಭಾಗದಲ್ಲಿ ಇನ್ನೂ ಹೊಂದಾಣಿಕೆ ಸಂಪ್ರದಾಯ ಜೀವಂತವಾಗಿವೆ ಎಂಬುದಕ್ಕೆ ಈ ಗ್ರಾಮವೇ ಸಾಕ್ಷಿ. ವಿದ್ಯಾರ್ಥಿಗಳು ತಮ್ಮ ಭವಿಷ್ಯದ ಜೀವನವನ್ನು ರೂಪಿಸಿಕೊಳ್ಳಲು ಎನ್ ಎಸ್ಎಸ್ ನಂತಹ ಶಿಬಿರಗಳು ಅತ್ಯಂತ ಸಹಕಾರಿಯಾಗಿವೆ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲ ರಾಜೀವ್ ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ಸಮಾಜದ ಋಣವನ್ನು ತೀರಿಸಲು ಇರುವ ಒಂದು ವೇದಿಕೆ. ಇದರಿಂದ ಸಮಾಜದಲ್ಲಿ ವಿದ್ಯಾರ್ಥಿಗಳಿಗೆ ಗೌರವ ಲಭಿಸುತ್ತದೆ,ಇಂತಹ ಶಿಬಿರದ ಪ್ರಯೋಜನವನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಡಾ. ವಿ.ಡಿ. ಗುರುಪ್ರಸಾದ್, ಸಹಶಿಬಿರಾಧಿಕಾರಿ ಐ. ಸುಶ್ಮಿತಾ, ಡಾ. ಸಿ.ಎನ್. ಸುರೇಶ್, ಸೋಮನಹಳ್ಳಿ ಸರ್ಕಾರಿ ಪದವಿಪೂರ್ವ ಕಾಲೇಜಿನ ಉಪನ್ಯಾಸಕ ವಿ.ಎಸ್. ಚಂದ್ರು, ದೈಹಿಕ ಶಿಕ್ಷಣ ನಿರ್ದೇಶಕ ಗಿರೀಶ್, ಗ್ರಾಮದ ಯಜಮಾನ್ ಸ್ವಾಮಿಗೌಡ, ಗ್ರಾಮಸ್ಥರಾದ ಮೋಹನ್, ಗಣೇಶ್ ಇತರರಿದ್ದರು.

# ಖಜಾನೆಯಿಂದ ಚನ್ನಕೇಶವ ಸ್ವಾಮಿ ಆಭರಣ ರವಾನೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಬೇಲೂರು: ಐತಿಹಾಸಿಕ ಶ್ರೀ ಚನ್ನಕೇಶವ ಸ್ವಾಮಿ ಚಿನ್ನಾಭರಣವನ್ನು ತಾಲ್ಲೂಕು ಖಜಾನೆಯಿಂದ ಸಂಪ್ರದಾಯಬದ್ಧವಾಗಿ ರವಾನಿಸಲಾಯಿತು.

ಚನ್ನಕೇಶವ ಸ್ವಾಮಿ ಜಾತ್ರೆ ಮತ್ತು ರಥೋತ್ಸವಕಕ್ಕೆ ದಿನಗಣನೆ ಆರಂಭವಾಗಿದೆ. ಶ್ರೀ ಚನ್ನಕೇಶವ ಸ್ವಾಮಿ ರಥೋತ್ಸವ ಹಾಗೂ ವಿಶೇಷ ಪೂಜಾ ವಿಧಿ ವಿಧಾನಗಳು ಪ್ರಾರಂಭವಾಗುವ ಹಿನ್ನಲೆಯಲ್ಲಿ ಶ್ರೀ ಚನ್ನಕೇಶವ, ಸೌಮ್ಯನಾಯಕಿ, ರಂಗನಾಯಕಿ ಅಮ್ಮನವರಿಗೆ ಧರಿಸುವ ಒಡವೆಗಳನ್ನು ಪ್ರಧಾನ ಅರ್ಚಕ ಬಿ.ಎಸ್.ಶ್ರೀನಿವಾಸ್ ಭಟ್ಟ ಹಾಗೂ ಬಿ.ಕೆ. ನರಸಿಂಹ ಭಟ್ಟ ಅವರಿಗೆ ತಹಶೀಲ್ದಾರ್ ಶ್ರೀಧರ್ ಕಂಕಣವಾಡಿ, ಪೊಲೀಸ್ ಇನ್ಸ್ಪೆಕ್ಟರ್ ರೇವಣ್ಣ, ಕ್ಷೇತ್ರ ಶಿಕ್ಷಣಾಧಿಕಾರಿ ಭಾಗ್ಯಮ್ಮ, ದೇಗುಲದ ಕಾರ್ಯನಿರ್ವಾಹಕ ಅಧಿಕಾರಿ ಕೆ.ಎನ್. ಯೋಗೇಶ್, ವರ್ತಕರ ಸಂಘದ ಅಧ್ಯಕ್ಷ ಗಿರಿಯಪ್ಪ ಶೆಟ್ಟಿ ಇತರರಿದ್ದರು.

ತಹಸೀಲ್ದಾರ್ ಶ್ರೀಧರ್ ಕಂಕಣವಾಡಿ ಮಾತನಾಡಿ, ಪ್ರತಿ ವರ್ಷದಂತೆ ಈ ವರ್ಷವೂ ಶ್ರೀ ಚನ್ನಕೇಶವಸ್ವಾಮಿಯ ಜಾತ್ರಾ ಮಹೋತ್ಸವ ವಿಜೃಂಭಣೆಯಿಂದ ನಡೆಯಲಿದೆ. ಮೈಸೂರು ಮಹಾರಾಜರು ಸೇರಿ ಅನೇಕ ಭಕ್ತರು ವಿವಿಧ ಕಾಲಘಟ್ಟಗಳಲ್ಲಿ ದೇವರಿಗೆ ಬಂಗಾರದ ಆಭರಣಗಳನ್ನು ದೇಣಿಗೆಯಾಗಿ ನೀಡಿದ್ದು, ಅವುಗಳನ್ನು ಉತ್ಸವ ಮೂರ್ತಿ ಹಾಗೂ ಮೂಲ ಮೂರ್ತಿಗೆ ಅಲಂಕಾರವಾಗಿ ಧರಿಸಲಾಗುತ್ತದೆ ಎಂದರು.

ದೇವಾಲಯದ ಪ್ರಧಾನ ಅರ್ಚಕ ಶ್ರೀನಿವಾಸ್ ಭಟ್ ಅವರು ಧಾರ್ಮಿಕ ಮಂತ್ರಾಚರಣೆಯೊಂದಿಗೆ ಜಾತ್ರಾ ಮಹೋತ್ಸವದ ಮಹತ್ವವನ್ನು ವಿವರಿಸಿ ಶುದ್ಧಿ ಪುಣ್ಯಾಹ ಕಾರ್ಯಗಳನ್ನು ನೆರವೇರಿಸಲಾಗುವುದು ಎಂದರು.

ಪೊಲೀಸ್ ಇನ್ಸಪೆಕ್ಟರ್ ರೇವಣ್ಣ ಮಾತನಾಡಿ, ಪ್ರತಿವರ್ಷಕ್ಕಿಂತ ಈ ವರ್ಷ ಹೆಚ್ಚಿನ ಪೊಲೀಸ್ ಸಿಬ್ಬಂದಿಯನ್ನು ಭದ್ರತೆಗಾಗಿ ನಿಯೋಜಿಸಲಾಗುವುದು. ಯಾವುದೇ ರೀತಿಯ ಅಹಿತಕರ ಘಟನೆ ನಡೆಯದಂತೆ ಇಲಾಖೆಯಿಂದ ಕ್ರಮ ವಹಿಸಲಾಗಿದೆ. ಮಹಿಳೆಯರು ಬಂಗಾರದ ಬೆಲೆ ಗಗನಕೇರಿದ್ದು ರಥೋತ್ಸವದ ಸಮಯದಲ್ಲಿ ಮೈ ಮೇಲೆ ಎಚ್ಚರಿಕೆಯಿಂದ ಇರುವಂತೆ ಮನವಿ ಮಾಡಿದರು.

# ಇತಿಹಾಸದಲ್ಲಿ ಈ ದಿನ

## ಮಾರ್ಚ್-21

1960: ದಕ್ಷಿಣ ಆಫ್ರಿಕಾದಲ್ಲಿ ನಡೆದ ಶಾರ್ಪ್‌ವಿಲ್ ಹತ್ಯಾಕಾಂಡದಲ್ಲಿ ಪೊಲೀಸರ ಗುಂಡಿನ ದಾಳಿಗೆ 69 ಜನರು ಸಾವನ್ನಪ್ಪಿದರು.

1963: ಅಮೆರಿಕಾದ ಅಲ್ಕಾಟ್ರಾಜ್ ಫೆಡರಲ್ ಜೈಲು ಅಧಿಕೃತವಾಗಿ ಮುಚ್ಚಲಾಯಿತು.

2006: ಸಾಮಾಜಿಕ ಜಾಲತಾಣ ಟ್ವಿಟ್ಟರ್ ಪ್ರಾರಂಭವಾಯಿತು.

**ಜನನ**

1685: ಯೋಹಾನ್ ಸೆಬಾಸ್ಟಿಯನ್ ಬಾಕ್, ಪ್ರಸಿದ್ಧ ಸಂಗೀತಗಾರ

1960: ಐರ್ಟನ್ ಸೆನ್ನಾ, ಖ್ಯಾತ ರೇಸರ್

1980: ರೊನಾಲ್ಡಿನ್ಯೊ, ಪ್ರಸಿದ್ಧ ಫುಟ್ಬಾಲ್ ಆಟಗಾರ

**ಮರಣ**

2013: ಚಿನುವಾ ಅಚೇಬೆ, ಖ್ಯಾತ ಲೇಖಕ

# ಮಾಡಾಳು ಗ್ರಾಮದಲ್ಲಿ ಸಂಭ್ರಮದ ಯುಗಾದಿ ಹಬ್ಬ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**




ಮಾಡಾಳು: ಗ್ರಾಮದ ಮೂಲಸ್ಥಾನ ಶ್ರೀ ಸ್ವರ್ಣ ಗೌರಮ್ಮದೇವಿ ದೇವಾಲಯದಲ್ಲಿ ಯುಗಾದಿ ಅಮಾವಾಸೆ ವಿಶೇಷ ಪೂಜೆ ನೂರಾರು ಭಕ್ತರ ಸಮ್ಮುಖದಲ್ಲಿ ಶ್ರದ್ಧಾ ಭಕ್ತಿಯಿಂದ ವಿಜೃಂಭಣೆಯಿಂದ ಜರುಗಿತು.

ಅರಸೀಕೆರೆ ತಾಲೂಕಿನ ಇತಿಹಾಸ ಪ್ರಸಿದ್ಧ ಪುಣ್ಯಕ್ಷೇತ್ರ ತಾಯಿ ಜಗನ್ಮಾತೆ ಅಮ್ಮನವರ ದೇವಾಲಯದಲ್ಲಿ ಸಂಪ್ರದಾಯದಂತೆ ಲೋಕ ಕಲ್ಯಾಣಾರ್ಥವಾಗಿ ಪ್ರತಿ ತಿಂಗಳು ದೇವಿಗೆ ಧಾರ್ಮಿಕ ವಿಧಿ ವಿಧಾನಗಳಿಂದ ಪೂಜೆ ಸಲ್ಲಿಸಲಾಗುತ್ತದೆ. ಆದರೆ ಈ ಬಾರಿ ಯುಗಾದಿ ಹಬ್ಬ ಹಾಗೂ ಅಮಾವಾಸೆ ನಿಮಿತ್ತ ಅಮ್ಮನವರಿಗೆ ಬಣ್ಣ ಬಣ್ಣದ ಹೂಗಳಿಂದ ವಿಶೇಷ ಅಲಂಕಾರ ಮಾಡಿದ್ದು ಭಕ್ತರ ಕಣ್ಮನ ಸೆಳೆಯಿತು. ಮುಂಜಾನೆ ರುದ್ರಾಭಿಷೇಕ ಸಹಸ್ರ ಬಿಲ್ವಾರ್ಚನೆಯನ್ನು ಪುರೋಹಿತರು ಶಾಸ್ತ್ರೋಕ್ತವಾಗಿ ನೆರವೇರಿಸಿದರು.

ಪೂಜೆಯ ಅಂಗವಾಗಿ ದೇವಾಲಯವನ್ನು ತಳಿರು ತೋರಣ, ಬಾಳೆ ಕಂದುಗಳಿಂದ ಶೃಂಗರಿಸಿದ್ದು ಬಣ್ಣ ಬಣ್ಣದ ವಿದ್ಯುತ್ ದೀಪಗಳಿಂದ ಅಲಂಕರಿಸಲಾಗಿತ್ತು. ರಾತ್ರಿ 8 ಗಂಟೆಗೆ ಸರಿಯಾಗಿ ಪುರೋಹಿತರಿಂದ ಕೋಡಿಮಠಗದ್ದುಗೆಯಲ್ಲಿ ಯೋಗ ಸಮಾಧಿಯಲ್ಲಿರುವ ಮಹಾ ತಪಸ್ವಿ ಶಿವಲಿಂಗ ಅಜ್ಜಯ್ಯ ಮೂರ್ತಿ ಹಾಗೂ ಗ್ರಾಮದ ಆರಾಧ್ಯ ದೈವ ಶ್ರೀ ಗುರು ಚನ್ನಬಸವೇಶ್ವರ ಸ್ವಾಮಿ ಮತ್ತು ಅಮ್ಮ ನವರಿಗೆ ಪೂಜೆ ಸಲ್ಲಿಸಿ ಮಹಾಮಂಗಳಾರತಿಯನ್ನು ಭಕ್ತಿ ಭಾವದಿಂದ ನೆರವೇರಿಸಲಾಯಿತು. ನಂತರ ಬಂದ ಭಕ್ತಾದಿಗಳಿಗೆ ಕಡಲಮಗೆ ಗ್ರಾಮಸ್ಥರು ದಾಸೋಹ ವ್ಯವಸ್ಥೆ ಕಲ್ಪಿಸಿದ್ದರು. ಗ್ರಾಮಸ್ಥರು ಸೇರಿದಂತೆ ಸೀತಾಪುರ ಕೊಪ್ಪಲು ಯರೆಹಳ್ಳಿ, ಡಿಎಂ ಕುರ್ಕೆ, ಶಶಿವಾಳ, ರಾಂಪುರ, ಸೊಪ್ಪಿನಹಳ್ಳಿ, ದಿಬ್ಬೂರು, ವೈ.ಜಿ.ಹಳ್ಳಿ, ಪಿ.ಹೊಸಳ್ಳಿ, ಕಿತ್ತನಕೆರೆ ಭಾಗವಹಿಸಿದ್ದರು.

# ಮಳ್ಳೇನಹಳ್ಳಿಯಲ್ಲಿ ದೇಗುಲ ನಿರ್ಮಾಣಕ್ಕೆ ಭೂಮಿಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**



ಚನ್ನರಾಯಪಟ್ಟಣ: ತಾಲೂಕಿನ ಕಸಬಾ ಹೋಬಳಿ ಮಳ್ಳೇನಹಳ್ಳಿ ಗ್ರಾಮದಲ್ಲಿ 14 ಲಕ್ಷ ರೂ.ವೆಚ್ಚದ ಶ್ರೀ ವೀರಭದ್ರಸ್ವಾಮಿ ದೇವಸ್ಥಾನ ನಿರ್ಮಾಣಕ್ಕೆ ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಹಾಗೂ ನಗರ ಯೋಜನಾ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಣತಿ ಆನಂದ್ ಭೂಮಿಪೂಜೆ ನೆರವೇರಿಸಿದರು.

ಶ್ರೀ ವೀರಭದ್ರಸ್ವಾಮಿ ದೇವಸ್ಥಾನದ ಶಂಕುಸ್ಥಾಪನಾ ಕಾರ್ಯದಲ್ಲಿ ಗುಡಿಭಟ್ಟರ ಕುಟುಂಬಸ್ಥರಿಂದ ಶಾಸ್ತ್ರೋಕ್ತವಾಗಿ ಪೂಜಾ ವಿಧಿವಿಧಾನ ನೆರವೇರಿಸಿದರು.

ಮಾಜಿ ಶಾಸಕ ಸಿ.ಎಸ್.ಪುಟ್ಟೇಗೌಡ ಮಾತನಾಡಿ, ದೇವಸ್ಥಾನ ನಿರ್ಮಾಣದ ಸಂಕಲ್ಪ ಮಾಡಿರುವ ಗ್ರಾಮಸ್ಥರಿಗೆ ಯಾವುದೇ ಅಡೆತಡೆ ಆಗದೇ ಶೀಘ್ರ ದೇವಸ್ಥಾನ ನಿರ್ಮಾಣವಾಗಿ ನಿಮ್ಮೆಲ್ಲರಿಗೂ ಭಗವಂತನ ದರ್ಶನ ಸಿಗಲಿ ಎಂದರು.

ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಹರೀಶ್ ಮಾತನಾಡಿ, ನಮ್ಮ ಗ್ರಾಮದಲ್ಲಿ ನಿರ್ಮಾಣ ಮಾಡಲಾಗುತ್ತಿರುವ ವೀರಭದ್ರಸ್ವಾಮಿ ದೇವಸ್ಥಾನಕ್ಕೆ ಪ್ರಮುಖವಾಗಿ ಗ್ರಾಮದ ಪರಿಶಿಷ್ಟ ಸಮುದಾಯದ ಜನರು ಅತಿ ಹೆಚ್ಚಿನ ಹಣವನ್ನು ಪ್ರತಿ ಮನೆಗಿಷ್ಟು ಎಂಬುದಾಗಿ ಕ್ರೋಢಿಕರಿಸಿದ್ದಾರೆ. ಅದರೊಂದಿಗೆ ಗ್ರಾಮದ ಹಿರಿಯರು, ಇತರೆ ಸಮುದಾಯದವರು ಸೇರಿ 13.5 ಲಕ್ಷ ರೂ. ಕ್ರೋಢಿಕರಿಸಲಾಗಿದೆ. ಮುಜರಾಯಿ ಇಲಾಖೆಯಡಿ ತಹಶೀಲ್ದಾರ್‌ರವರು ಅನುದಾನ ಕೊಡಿಸುವ ಭರವಸೆ ನೀಡಿದ್ದಾರೆ. ಇನ್ನೊಂದು ವರ್ಷದಲ್ಲಿ ದೇವಸ್ಥಾನ ನಿರ್ಮಿಸಿಕೊಡುವ ಭರವಸೆಯನ್ನು ಗುತ್ತಿಗೆದಾರ ರವಿಕುಮಾರ್ ಹೇಳಿದ್ದು ಅದಕ್ಕೆ ಪೂರಕವಾಗಿ ಗ್ರಾಮಸ್ಥರು ಹೆಚ್ಚಿನ ಸಹಕಾರ ನೀಡಿ ದೇವಸ್ಥಾನದ ಉದ್ಘಾಟನೆಗೆ ಮುಂದಾಗುವಂತೆ ಮನವಿ ನೀಡಿದರು.

ಮುಖಂಡರಾದ ಸುಬ್ಬಣ್ಣ, ಜಯರಾವ್, ಕುಶಣ್ಣ, ರಾಜು, ರಂಗಸ್ವಾಮಿ, ಸುರೇಶ್, ಶಿವು, ಕಾಂತರಾಜು ಇತರರಿದ್ದರು.

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248